# CHAMARAJANAGARA UNIVERSITY

SUVARNA GANGOTRI, CHAMARAJANAGARA - 571313

**Prof. M.R. Gangadhar,** M.Sc., Ph.D.
**Vice-Chancellor**

Office: 08226-297512
Mobile: 9448734992
Email: vccu.uni@gmail.com
Email: gangadharmr@gmail.com


No:CUC/VCS/111/2023-24

Date:31.10.2023

## ಅಧಿಸೂಚನೆ

ವಿಷಯ:-2023-24ನೇ ಶೈಕ್ಷಣಿಕ ಸಾಲಿನ ಎಲ್ಲಾ ಸ್ನಾತಕೋತ್ತರ ಕೋರ್ಸುಗಳಲ್ಲಿ ಭರ್ತಿಯಾಗದೇ ಉಳಿದಿರುವ ಸೀಟುಗಳ (ಕೇಂದ್ರೀಕೃತ) ಪ್ರವೇಶಾತಿಯ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಅಧಿಸೂಚನೆ ದಿನಾಂಕ:01.09.2023

2. ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗಗಳ ಸಂಯೋಜಕರ / ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳ ಹಾಗು ವಿದ್ಯಾರ್ಥಿಗಳ ಮನವಿ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (2)ರ ಮನವಿಯನ್ನು ಆದರಿಸಿ, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಉಲ್ಲೇಖಿತ (1)ರ ಅಧಿಸೂಚನೆಯಲ್ಲಿನ ವೇಳಾಪಟ್ಟಿಯಂತೆ ಪ್ರವೇಶಾತಿ ಪ್ರಕ್ರಿಯೆ ನಡೆದ ನಂತರ ಭರ್ತಿಯಾಗದೆ ಉಳಿದಿರುವ ಸೀಟುಗಳಿಗೆ ಈ ಕೆಳಕಂಡಂತೆ ಕ್ರಮವಹಿಸಲು ತಿಳಿಸಿದೆ.

1. ಅರ್ಜಿಗಳನ್ನು ಹಾಕದೆ ಇರುವಂತಹ ವಿದ್ಯಾರ್ಥಿಗಳು ದಿನಾಂಕ:02.11.2023 ರಿಂದ 04.11.2023ರೊಳಗೆ ಪ್ರವೇಶಾತಿ ಬಯಸಿದ ಕೋರ್ಸಿಗೆ ಚಾಮರಾಜನಗರ ವಿಶ್ವವಿದ್ಯಾನಿಲಯಕ್ಕೆ ಅರ್ಜಿ ಸಲ್ಲಿಸುವುದು.
2. ಹೊಸದಾಗಿ ಅರ್ಜಿಸಲ್ಲಿಸುವ ವಿದ್ಯಾರ್ಥಿಗಳು ಮಾತ್ರ ರೂ. 500/- ಗಳನ್ನು ಪಾವತಿಸುವುದು.
3. ಈಗಾಗಲೇ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿರುವ ಕೋರ್ಸ್‌ಗಳಿಗೆ ಅವರ ಹೆಸರುಗಳನ್ನು ಮತ್ತೆ ಪರಿಗಣಿಸಲಾಗುವುದು. ಆದರೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಆಯಾಯ ವಿಭಾಗದ ಅಧ್ಯಕ್ಷರ ಬಳಿ ತಮ್ಮ ಹೆಸರನ್ನು ಕಡ್ಡಾಯವಾಗಿ ನೊಂದಾಯಿಸಬೇಕು. ಪುನಃ ಅರ್ಜಿ ಹಾಕುವ ಅವಶ್ಯಕತೆಯಿರುವುದಿಲ್ಲ. ಬೇರೆ ಕೋರ್ಸುಗಳಿಗೆ ಪ್ರವೇಶ ಬಯಸಿದ್ದಲ್ಲಿ (ಅರ್ಹತೆಯಿದ್ದಲ್ಲಿ ಮಾತ್ರ) ರೂ. 500/- ಪಾವತಿಸಿ ಅರ್ಜಿಯನ್ನು ಹಾಕಬೇಕು.
4. ಸ್ನಾತಕೋತ್ತರ ವಿಭಾಗಗಳ ಪ್ರವೇಶಾತಿ ಸಮಿತಿ ಅಧ್ಯಕ್ಷರು ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ ಪ್ರವೇಶಾತಿ ನೀಡುವುದು.
   i. ಸ್ಕೀಂ-'ಎ' ಸೀಟುಗಳು ಖಾಲಿ ಉಳಿದು, ಸ್ಕೀಂ-'ಬಿ' ಸೀಟುಗಳನ್ನು ಆಪರೇಟ್ ಮಾಡದಿದ್ದಲ್ಲಿ ಸ್ಕೀಂ-'ಎ' ಸೀಟುಗಳು ಭರ್ತಿಯಾಗದಿದ್ದಲ್ಲಿ ಸ್ಕೀಂ-'ಎ' ನಲ್ಲಿಯೇ ಭರ್ತಿಮಾಡಿ, ನಂತರ ಸ್ಕೀಂ-'ಬಿ' ಸೀಟುಗಳನ್ನು ಆಪರೇಟ್ ಮಾಡುವುದು.
   ii. ಸ್ಕೀಂ-'ಬಿ' ಸೀಟುಗಳು ಆಪರೇಟ್ ಆಗಿ, ಒಂದು ವೇಳೆ ಸ್ಕೀಂ-'ಎ' ಸೀಟುಗಳು ಖಾಲಿ ಉಳಿದಿದ್ದಲ್ಲಿ, ಅವುಗಳನ್ನು ಸ್ಕೀಂ-'ಬಿ' ಗೆ ಶಿಫ್ಟ್ ಮಾಡಿ, ಸ್ಕೀಂ-'ಬಿ' ಅಡಿಯಲ್ಲಿಯೆ ಪ್ರವೇಶಾತಿ ನೀಡುವುದು.
   iii. ದಿನಾಂಕ:06.11.2023 ರಿಂದ 07.11.2023 ಸಾಯಂಕಾಲ 5:00 ಗಂಟೆಯೊಳಗೆ ಹೊಸದಾಗಿ ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ(Verification). ಬದಲಾವಣೆಗಳಿದ್ದಲ್ಲಿ ಅಳವಡಿಸಿ ಪ್ರಕಟಿಸುವುದು.
   iv. ದಿನಾಂಕ:08.11.2023 ರಂದು ಬೆಳಗ್ಗೆ 10:00 ರಿಂದ 1:00 ಗಂಟೆಯವರೆಗೆ ವಿಭಾಗದಲ್ಲಿರುವ ರಿಜಿಸ್ಟರಿನಲ್ಲಿ ಸಹಿ ಮಾಡಿದ ವಿದ್ಯಾರ್ಥಿಗಳಿಗೆ Casual round ಮಾದರಿಯಲ್ಲಿ ದಿನಾಂಕ:09.10.2023 ಮತ್ತು 10.11.2023 ರವರೆಗೆ (ಸರ್ಕಾರಿ ರಜೆ ದಿನಗಳನ್ನು ಹೊರತುಪಡಿಸಿ) ಪ್ರವೇಶಾತಿಯನ್ನು ನಡೆಸಬೇಕು.
   v. ಸರ್ಕಾರಿ/ಖಾಸಗಿ/ಸಂಯೋಜಿತ ಕಾಲೇಜುಗಳಿಗೆ ಮೆರಿಟ್ ಮತ್ತು ಮೀಸಲಾತಿ ಆಧಾರದ ಮೇಲೆ ಚಾಮರಾಜನಗರ ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕಾದ ವರ್ಗವಾರು ಪ್ರವೇಶಾತಿ ಶುಲ್ಕವನ್ನು ಪಾವತಿಸಿಕೊಂಡು ಪ್ರವೇಶಾತಿ ನೀಡುವುದು.

ಕುಲಪತಿಗಳು

Vice-Chancellor
Chamarajanagara University
Chamarajanagara

ಪ್ರತಿಗಳು:

1. ಕುಲಸಚಿವರು (ಮೌಲ್ಯಮಾಪನ) ಚಾಮರಾಜನಗರ ವಿಶ್ವವಿದ್ಯಾನಿಲಯ, ಚಾಮರಾಜನಗರ.
2. ಹಣಕಾಸು ಅಧಿಕಾರಿಗಳು ಚಾಮರಾಜನಗರ ವಿಶ್ವವಿದ್ಯಾನಿಲಯ, ಚಾಮರಾಜನಗರ.
3. ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ನಡೆಸುತ್ತಿರುವ ಚಾಮರಾಜನಗರ ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡಿರುವ ಎಲ್ಲಾ ಸರ್ಕಾರಿ/ಖಾಸಗಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

Scanned with CamScanner

GOVERNMENT OF KARNATAKA

# CHAMARAJANAGARA UNIVERSITY

SUVARNA GANGOTRI, CHAMARAJANAGARA - 571313

**Prof. M.R. Gangadhar,** M.Sc., Ph.D.
**Vice-Chancellor**

Office: 08226-297512
Mobile: 9448734992
Email: vccu.uni@gmail.com
Email: gangadharmr@gmail.com

No:CUC/VCS/112/2023-24

Date:02.11.2023

## ಪ್ರಕಟಣೆ

****

ಶೈಕ್ಷಣಿಕ ವರ್ಷ 2023–24 ನೇ ಸಾಲಿನಲ್ಲಿ ಚಾಮರಾಜನಗರ ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿರುವ ಸ್ನಾತಕೋತ್ತರ ವಿಭಾಗಗಳು ಹಾಗೂ ಚಾಮರಾಜನಗರ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿ ನಡೆಯುತ್ತಿರುವ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಭರ್ತಿಯಾಗದೇ ಖಾಲಿ ಉಳಿದಿರುವ ಸೀಟುಗಳಿಗೆ ಪ್ರವೇಶಾತಿಗೆ ಅರ್ಜಿಗಳನ್ನು (Offline) ಸಲ್ಲಿಸುವ ದಿನಾಂಕವನ್ನು ದಿ:04.11.2023 ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಯನ್ನು ಚಾಮರಾಜನಗರ ವಿಶ್ವವಿದ್ಯಾನಿಲಯದ ವೆಬ್‌ಸೈಟ್ https://cuc.karnataka.gov.in ನಲ್ಲಿ ಪಡೆಯಬಹುದು.

ಕುಲಪತಿಗಳು
Vice-Chancellor
Chamarajanagara University
Chamarajanagara

Scanned with CamScanner